ತರ್ಕ ಎಲ್ಲಕ್ಕೂ ಆಧಾರವಾಗಿದೆ. ಔಷಧಿಗಳ ಚಿಕಿತ್ಸೆಯೂ ಇದನ್ನೇ ಆಧರಿಸಿದೆ. ದೇಹದ ಕಾರ್ಯಗಳು ಈ ತ್ರಿದೋಷಗಳಿಂದ ನಡೆಸಲ್ಪಡುತ್ತವೆ.

### ಪಂಚಕರ್ಮ ಚಿಕಿತ್ಸೆ

ನೈಸರ್ಗಿಕವಾಗಿ ಸಿಗುವ ಗಿಡಗಳು, ಮೂಲಿಕೆಗಳು, ಹೂವುಗಳು, ಮರಗಳ ತೊಗಟೆ, ಬೀಜಗಳು, ಹಣ್ಣುಗಳು, ಬೇರುಗಳು ಮತ್ತು ಚಿಗುರುಗಳಿಂದ ಈ ಔಷಧಿಗಳನ್ನು ಸಿದ್ಧಪಡಿಸಿ ರೋಗಿಗಳಿಗೆ ಮಾತ್ರೆಗಳು, ಚೂರ್ಣ/ಪುಡಿಗಳು, ಲೇಹ್ಯ, ಕಷಾಯ, ಔಷಧಿಯುಕ್ತ ತುಪ್ಪ, ತೈಲಗಳ ರೂಪಗಳಲ್ಲಿ ಸೇವಿಸಲು ಕೊಡಲಾಗುತ್ತದೆ. ಇವುಗಳಿಂದ ಕೇವಲ ದೈಹಿಕ ರೋಗಗಳಷ್ಟೇ ಅಲ್ಲ, ಮಾನಸಿಕ ವ್ಯಾಧಿಗಳೂ ಪರಿಣಾಮಕಾರಿಯಾಗಿ ವಾಸಿಯಾಗುತ್ತವೆ.

ಪಂಚಕರ್ಮ ಚಿಕಿತ್ಸೆಯು ರೋಗಗಳನ್ನು ಗುಣಪಡಿಸುವುದರಲ್ಲಿ ಮುಖ್ಯವಾಗಿದೆ. ಇದರಿಂದ ದೋಷಗಳನ್ನು ಪರಿಹರಿಸಬಹುದಾಗಿದೆ. ಹೆಚ್ಚಾಗಿರುವ ದೋಷಗಳನ್ನು ಸರಿಪಡಿಸಿ ಸಮತೋಲನವನ್ನು ಕಾಪಾಡುವಲ್ಲಿ ಪಂಚಕರ್ಮ ಚಿಕಿತ್ಸೆಯು ಪ್ರಧಾನವಾಗಿದೆ. ಈ ಕಾರಣದಿಂದ ಪಂಚಕರ್ಮ ಚಿಕಿತ್ಸೆಯು ಇಂದು ಆರೋಗ್ಯ ಮತ್ತು ಸುಸ್ಥಿರತೆಗೆ ಪರ್ಯಾಯವಾಗಿದೆ. ಋತುಗಳಲ್ಲಿ ಅಧಿಕಗೊಳ್ಳುವ ದೋಷಗಳನ್ನು ನಿವಾರಿಸಲು ಇದು ಅತ್ಯಗತ್ಯ ಎಂದು ಚರಕ ಹೇಳಿದ್ದಾನೆ. ಪಂಚಕರ್ಮ ಚಿಕಿತ್ಸೆಯ ಐದು ವಿಧಾನಗಳೆಂದರೆ:

* ವಮನ ಕರ್ಮ
* ವಿರೇಚನ
* ನಸ್ಯ ಕರ್ಮ
* ಬಸ್ತಿ
* ನಿರೂಹಬಸ್ತಿ

ಇತ್ತೀಚೆಗೆ ನಗರಗಳು ಮತ್ತು ಪಟ್ಟಣಗಳಲ್ಲಿ ಪಂಚಕರ್ಮ ಚಿಕಿತ್ಸಾ ಕೇಂದ್ರಗಳು ಹೆಚ್ಚಾಗಿ ಕಾಣಸಿಗುತ್ತಿವೆ. ಇವುಗಳಲ್ಲಿ ಚರ್ಮ ಚಿಕಿತ್ಸೆ, ಸ್ಥೂಲಕಾಯ, ಕೇಶ ಆರೈಕೆ ಹಾಗೂ ಒತ್ತಡ ನಿವಾರಣೆಗಾಗಿಯೂ ಚಿಕಿತ್ಸೆಗಳನ್ನು ನೀಡಲಾಗುತ್ತಿದೆ. ಆದರೆ ಒಂದನ್ನು ನೆನಪಿಟ್ಟುಕೊಳ್ಳಬೇಕು–ಪಂಚಕರ್ಮ ಚಿಕಿತ್ಸೆಯ ನಂತರ ಜೀವನಶೈಲಿಯ ನಿರ್ವಹಣೆ ಬಹುಮುಖ್ಯ. ಇಲ್ಲವಾದಲ್ಲಿ ರೋಗಲಕ್ಷಣಗಳು ಮರುಕಳಿಸುವ ಸಾಧ್ಯತೆ ಇದೆ.

### ಔಷಧೀಯ ಸಸ್ಯಗಳ ಪಾತ್ರ

ಔಷಧೀಯ ಸಸ್ಯಗಳು ಭಾರತೀಯ ಪರಂಪರೆಯಲ್ಲಿ ಎಲ್ಲಾ ಕಾಲದಲ್ಲೂ ವಿಶೇಷ ಸ್ಥಾನ ಪಡೆದಿವೆ. ಅಥರ್ವ ವೇದದಲ್ಲಿ ಚಿಕಿತ್ಸೆಗಾಗಿ ಬಳಸಲಾಗುವ ಔಷಧೀಯ ಸಸ್ಯಗಳ ಉಲ್ಲೇಖಗಳು ಸಾಕಷ್ಟು ಕಂಡುಬಂದಿವೆ. ಔಷಧೀಯ ಸಸ್ಯಗಳ ಕುರಿತು ಅನೇಕ ಸ್ತುತಿಗಳೂ ವೇದಗಳಲ್ಲಿ ಕಂಡುಬರುತ್ತವೆ. ಅಥರ್ವ ವೇದದಲ್ಲಿ ದರ್ಭೆ, ಶತಾವರಿ ಮತ್ತು ಗುಗ್ಗಳ ಸಸ್ಯಗಳ ಭಾಗಗಳನ್ನು ಔಷಧಿಗಳ ಮತ್ತು ತಾಯಿತಗಳ ರೂಪದಲ್ಲಿ ರೋಗಗಳನ್ನು ತಡೆಯಲು ಬಳಸುವ ಪ್ರಸ್ತಾಪ ಬರುತ್ತದೆ. ಜ್ವರ ಬಂದಾಗ ಪ್ರಾಣಿಗಳು ಕೆಲವು ಸಸ್ಯಗಳನ್ನು ಆರಿಸಿಕೊಂಡು ಅವುಗಳನ್ನೇ ಸೇವಿಸುವುದನ್ನು ಚರಕನು ಗಮನಿಸಿದ್ದನು. ಹೀಗೆ ಗಿಡಮೂಲಿಕೆಗಳನ್ನು ಹುಡುಕಿ ಸೇವಿಸುವುದು ಪ್ರಾಣಿಗಳಿಗೆ ಅಂತಃಸ್ಫೂರ್ತಿಯಿಂದ ತಿಳಿಯುತ್ತದೆ ಎಂದು ಆತ ಭಾವಿಸಿದ್ದನು. ಕುರುಬರು ಮತ್ತು ಕಾಡುಮನುಷ್ಯರಿಗೆ ಗಿಡಗಳ ಬಗೆಗಿದ್ದ ಜ್ಞಾನವೇ ಔಷಧೀಯ ಪದ್ಧತಿಗೆ ನಾಂದಿ ಹಾಡಿತು ಎಂದು ಅವನು ಹೇಳಿದ್ದಾನೆ.

ಚರಕ ಸಂಹಿತೆಯಲ್ಲಿ 1990ಕ್ಕೂ ಹೆಚ್ಚು ಔಷಧೀಯ ಸಸ್ಯಗಳ ಹೆಸರುಗಳನ್ನು ಉಲ್ಲೇಖಿಸಲಾಗಿದೆ. ಇವುಗಳಲ್ಲಿ 627 ಹೆಸರುಗಳು ಪರ್ಯಾಯ ಪದಗಳಿವೆ ಎಂದು ಗುರುತಿಸಲಾಗಿದೆ. ಈ ಸಸ್ಯಗಳನ್ನು ಒಂದು ವ್ಯವಸ್ಥಿತ ರೀತಿಯಲ್ಲಿ ವಿವರಿಸಲಾಗಿದೆ. ಇವುಗಳನ್ನು ನಿಸರ್ಗದ ಅನೇಕಾನೇಕ ಸಾವಿರ ಗಿಡ ಮರಗಳ ನಡುವೆ ಗುರುತಿಸಲಾಗಿದೆ. ಔಷಧೀಯ ಗುಣಗಳನ್ನು ಇವುಗಳ ಬೇರು, ತೊಗಟೆ, ಹೂವು, ಹಣ್ಣು ಹಾಗೂ ಇತರ ಭಾಗಗಳಲ್ಲಿ ಕಾಣಲಾಗಿದೆ.

ಔಷಧಿಗಳನ್ನು ತಯಾರಿಸಲು ಈ ಸಸ್ಯಗಳ ನೈಸರ್ಗಿಕ ಭಾಗಗಳನ್ನು ತೆಗೆದುಕೊಂಡು, ವಿಷಕಾರಿ ಗುಣಗಳಿದ್ದರೆ ಅವುಗಳನ್ನು ಪರಿಹರಿಸಿ ನಿರ್ದಿಷ್ಟ



### ಕ್ಯಾನ್ಸರ್, ಡಯಾಬಿಟಿಸ್ ಗುಣವಾಗುತ್ತದೆಯೆ?

ಆಯುರ್ವೇದದಲ್ಲಿ ಕ್ಯಾನ್ಸರ್‌ಅನ್ನು ಸಂಪೂರ್ಣ ಗುಣಪಡಿಸುವ ಔಷಧಿ ಲಭ್ಯ ಇಲ್ಲ. ಈ ನಿಟ್ಟಿನಲ್ಲಿ ದೇಶದಲ್ಲೆಡೆ ಆಯುರ್ವೇದ ಸಂಶೋಧನೆಗಳು ಜರುಗುತ್ತಿವೆಯಾದರೂ , ಇನ್ನೂ ಯಾವುದೇ ಔಷಧಿ ಲಭ್ಯವಿಲ್ಲ. ಈ ಕುರಿತ ಜಾಹೀರಾತುಗಳನ್ನು ನಂಬಬೇಡಿ. ಅದರಲ್ಲೂ ಲ್ಯುಕೇಮಿಯಾವಂತೂ ಗುಣವಾಗುವುದು ಸಾಧ್ಯವಿಲ್ಲ. ಸುಮ್ಮನೆ ಹಣ, ಶಕ್ತಿ ಮತ್ತು ಸಮಯವನ್ನು ವ್ಯರ್ಥ ಮಾಡಬೇಡಿ.

ಅರ್ಬುದ (ಕ್ಯಾನ್ಸರ್)ದ ಬಗ್ಗೆ ಆಯುರ್ವೇದದಲ್ಲಿ ಉಲ್ಲೇಖವಿದ್ದರೂ, 'ಅಸಾಧ್ಯ' ಅಂದರೆ, ಗುಣಪಡಿಸಲಾಗದ್ದು ಎಂದೇ ಹೇಳಲಾಗಿದೆ. ಆದರೆ ಆಧುನಿಕ ವೈದ್ಯಪದ್ಧತಿಯಲ್ಲಿ ಕಿಮೋಥೆರಪಿಯಿಂದ ವಿವಿಧ ಕ್ಯಾನ್ಸರ್‌ಗಳು ನಿಯಂತ್ರಣಕ್ಕೆ ಬರುತ್ತವೆ. ಆದ್ದರಿಂದ, ಒಂದು ಬಾರಿ ನಿಯಂತ್ರಣಕ್ಕೆ ಬಂದ ನಂತರ ಜೀವನಶೈಲಿ, ಆಹಾರಪದ್ಧತಿ ಸರಿಪಡಿಸಿಕೊಂಡು ರೋಗನಿರೋಧಕ ಶಕ್ತಿ ಹೆಚ್ಚಲು ಆಯುರ್ವೇದ ಔಷಧಿಗಳನ್ನು ಸೇವಿಸಬಹುದು.

ಇನ್ನು ಸಕ್ಕರೆ ಕಾಯಿಲೆಯ ವಿಷಯ. ಸಕ್ಕರೆ ಕಾಯಿಲೆಯು ರಕ್ತದಲ್ಲಿ ಸಕ್ಕರೆಯ ಮಟ್ಟದಲ್ಲಿ ಏರುಪೇರು ಕಂಡು ಬಂದು ಕಾಣಿಸಿಕೊಳ್ಳುತ್ತದೆ. ಆಯುರ್ವೇದ ಆಗಲಿ ಅಲೋಪತಿಯಾಗಲೀ (ಆಧುನಿಕ ವೈದ್ಯ ಪದ್ಧತಿ) ಇದನ್ನು ನಿಯಂತ್ರಣದಲ್ಲಿ ಇಟ್ಟುಕೊಳ್ಳಬಹುದು. ಆದರೆ ಪೂರ್ತಿ ಗುಣವಾಗುವುದಿಲ್ಲ. ಔಷಧಿ ಸೇವನೆ, ಪಥ್ಯ, ವ್ಯಾಯಾಮ ಎಲ್ಲವೂ ಕ್ರಮಬದ್ಧವಾಗಿದ್ದಲ್ಲಿ ಬಹಳಬೇಗ ನಿಯಂತ್ರಣಕ್ಕೆ ಬರುತ್ತದೆ.

ನಾಲ್ಕೈದು ವರ್ಷಗಳ ಹಿಂದೆ ಸಕ್ಕರೆ ಕಾಯಿಲೆ (ಡಯಾಬಿಟಿಸ್) ಪೂರ್ತಿ ಗುಣಪಡಿಸುತ್ತೇವೆಂದು ಪತ್ರಿಕೆಯಲ್ಲಿ ಜಾಹೀರಾತು ನೀಡಿ, ಒಂದು ತಿಂಗಳ ಔಷಧಿಗೆ ೩೪ ಸಾವಿರ ರೂಪಾಯಿ ಪೀಕಿ ಒಂದು ವಾರದಲ್ಲಿ ಅಂಗಡಿ ಮುಚ್ಚಿಕೊಂಡು ಹೋಗಿದ್ದನ್ನು ನಾವು ನೋಡಿದ್ದೇವೆ.

ಅಂದ ಹಾಗೆ, ಆಯುರ್ವೇದ ವೈದ್ಯರ ಚಿಕಿತ್ಸೆಯಿಂದ ಮೋಸ ಹೋಗಿದ್ದರೆ, ಚಿಕಿತ್ಸೆಗೆ ಹೆಚ್ಚಿನ ಹಣ ವಸೂಲಿ ಮಾಡಿದ್ದರೆ, ಅವರ ವಿರುದ್ಧ ಗ್ರಾಹಕ ರಕ್ಷಣಾ ವೇದಿಕೆಗೆ ಮೊರೆ ಹೋಗಬಹುದು. (ಅಲೋಪಥಿ ವೈದ್ಯರ ವಿರುದ್ಧವೂ ದೂರು ನೀಡಬಹುದು.)

